ಕರ್ನಾಟಕ ಸರ್ಕಾರ

**ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ**

ಸಂಖ್ಯೆ:ಜಿ2/ಖಾಪ್ರಾಶಾ/ಆರ್.ಟಿ.ಇ./ಮಾನ/17/17-18 ದಿನಾಂಕ: 22/07//2017

**ನಮೂನೆ – 2**

**(See RTE Rule-II(4))**

ಇವರಿಗೆ,

ಮುಖ್ಯೋಪಾಧ್ಯಾಯರು,
ಶ್ರೀಕರಿ ಪಬ್ಲಿಕ್ ಸ್ಕೂಲ್,
ಹಂಪಿ ರಸ್ತೆ, ಅನಂತಶಯನಗುಡಿ,
ಹೊಸಪೇಟೆ

ವಿಷಯ:- ಕರ್ನಾಟಕ ರಾಜ್ಯ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ನಿಯಮಗಳು 2010ರ ನಿಯಮ 12 ಉಪನಿಯಮ 4 ರ ಪ್ರಕಾರ ಮತ್ತು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ 2009 ರ ಕಲಂ 18 ರ ಅಡಿಯಲ್ಲಿ ಶಾಲೆಯ ಮನ್ನಣೆ ಪ್ರಮಾಣ ಪತ್ರ ನೀಡುವ ಕುರಿತು.

ಉಲ್ಲೇಖ:- 1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸಪೇಟೆ ಇವರ ಪತ್ರ ಸಂಖ್ಯೆ: ಎ2/ಮಾನ/ಪ್ರಸ್ತಾವನೆ/ಸಲ್ಲಿ/ಬಗ್ಗೆ/77/2016-17 ದಿನಾಂಕ: 04/07/2017
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ7(8)ಪ್ರಾಶಿಅ.ಆರ್.ಟಿ.ಇ./ ಉದಾ.ನೋ.ಮಾ-09/2016-17 ದಿನಾಂಕ: 15/09/2016

ಶ್ರೀ / ಶ್ರೀಮತಿಯವರೇ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಅರ್ಜಿ ದಿನಾಂಕ: 24/06/2017 ರಲ್ಲಿ ಕೋರಿರುವಂತೆ, ತದನಂತರ ಶಾಲೆಯೊಂದಿಗೆ ಪತ್ರ ವ್ಯವಹಾರ / ಇಲಾಖೆಯ ಅಧಿಕಾರಿಗಳ ತಪಾಸಣೆಗೆ ಸಂಬಂಧಿಸಿದಂತೆ, ನಾನು ನಿಮ್ಮ ಶಾಲೆಗೆ ಹಂಗಾಮಿ ಮನ್ನಣೆ ಮಂಜೂರಾತಿ ಪತ್ರವನ್ನು ಆರ್.ಟಿ.ಇ. ಕಾಯ್ದೆ 2009 ಮತ್ತು ಉಲ್ಲೇಖಿತ (2)ರ ಮಾನ್ಯ ಆಯುಕ್ತರ ಪತ್ರದ ಷರತ್ತುಗಳಿಗೊಳಪಟ್ಟು **2016-17 ನೇ ಸಾಲಿನಿಂದ 2020-21** ನೇ ಸಾಲಿಗಾಗಿ ಒಟ್ಟು 5 ವರ್ಷಗಳಿಗಾಗಿ ಮತ್ತು ಈ ಕೆಳಕಂಡ ಷರತ್ತುಗಳ ಪೂರೈಕೆಯ ಷರತ್ತುಗಳೊಂದಿಗೆ ಮಾನ್ಯತೆಯನ್ನು ನೀಡಲಾಗಿದೆ.

| | | | |
|---|---|---|---|
| 01 | ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ | : | ಶ್ರೀಕರಿ ಪಬ್ಲಿಕ್ ಶಾಲೆ, ಲೋಟಸ್ ಸಾಯಿಬಾಬಾ ದೇವಸ್ಥಾನದ ಎದುರುಗಡೆ, ಹಂಪಿ ರಸ್ತೆ, ಅನಂತಶಯನಗುಡಿ, ಹೊಸಪೇಟೆ |
| 02 | ಆಡಳಿತ ಮಂಡಳಿಯ ಪೂರ್ಣ ವಿಳಾಸ | : | ಶ್ರೀಕರಿ ಎಜುಕೇಷನಲ್ ಟ್ರಸ್ಟ್, ಹೊಸಪೇಟೆ |
| 03 | ಶಾಲಾ ನೋಂದಣಿ ಸಂಖ್ಯೆ | : | ಸಿಬಿಎಸ್‌ಸಿ ಬೋರ್ಡ್, ದೆಹಲಿ ಪತ್ರ ಸಂಖ್ಯೆ: ಸಿಬಿಎಸ್‌ಇ/ಎಎಫ್‌ಎಫ್/830537-ಎಸ್‌ಎಲ್-00101-1415 ದಿನಾಂಕ: 28/07/2014 ರ ಪ್ರಕಾರ ಅಫಿಲೇಟೆಡ್ ಪಡೆದಿರುತ್ತದೆ |
| 04 | ಪಠ್ಯ ಕ್ರಮದ ವಿವರ | : | ಸಿ.ಬಿ.ಎಸ್.ಇ |
| 05 | ಅನುದಾನಿತ / ಅನುದಾನ ರಹಿತ | : | ಅನುದಾನ ರಹಿತ |
| 05 | ಆಡಳಿತ ಮಂಡಳಿ ಸ್ವರೂಪ | : | ಸಾಮಾನ್ಯ |
| 06 | ಮಾನ್ಯತೆ ನವೀಕರಣ ನೀಡಿದ ತರಗತಿಗಳು ಹಾಗೂ ಮಾಧ್ಯಮ | : | ತರಗತಿ / ವಿಭಾಗ / ಮಾಧ್ಯಮ<br>**01 ರಿಂದ 08** / **08** / ಆಂಗ್ಲ |
| 07 | ಶಾಲೆಗೆ ಮಾನ್ಯತೆ ನವೀಕರಿಸಿದ ವರ್ಷ | : | 2016-17 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ ಒಟ್ಟು 05 ವರ್ಷಗಳಿಗೆ |

PRINCIPAL
SRIKARI PUBLIC SCHOOL (CBSE)
A Senior Secondary School
ANANTHASAYANAGUDI
HOSAPETE - 583 201.

1. ಆರ್.ಟಿ.ಇ. ಕಾಯ್ದೆ ಮತ್ತು ನಿಯಮಗಳಡಿ ಮಂಜೂರು ಮಾಡುವ ಹಂಗಾಮಿ ಮನ್ನಣೆಯು 8 ನೇ ತರಗತಿಯಿಂದಾಚೆಗೆ ವ್ಯಾಪಿಸುವುದಿಲ್ಲ.
2. ಶಾಲೆಯ ಆರ್.ಟಿ.ಇ. ಕಾಯ್ದೆ 2009ರ ಉಪಬಂಧಗಳು ಮತ್ತು ಆರ್.ಟಿ.ಇ. 2010ರ ನಿಯಮ ಇದರಲ್ಲಿ ಉಲ್ಲೇಖಿಸಿರುವ ಎಲ್ಲಾ ಉಪಬಂಧಗಳನ್ನು ಪಾಲಿಸತಕ್ಕದ್ದು.
3. ಶಾಲೆಯು ಶೇ.25% ಪ್ರಮಾಣದಲ್ಲಿ 1 ನೇ ತರಗತಿಗೆ ದುರ್ಬಲ ವರ್ಗಕ್ಕೆ ಸೇರಿದ ಮತ್ತು ಅಕ್ಕಪಕ್ಕದ ಅನಾನುಕೂಲಗೊಂಡ ಗುಂಪಿನ ಮಕ್ಕಳನ್ನು ಸೇರಿಸಿಕೊಳ್ಳತಕ್ಕದ್ದು. ಮತ್ತು ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ/ಪೂರ್ಣವಾಗುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡತಕ್ಕದ್ದು, ಉಪಬಂಧಿಸಿದಂತೆ ಒಂದು ವೇಳೆ ಶಾಲೆಯು ಪೂರ್ವ ಪ್ರಾಥಮಿಕ ಶಾಲೆಗೆ ಸೇರಿಸಿಕೊಂಡರೂ ಸಹ ಶಾಲೆಯು ಈ ಷರತ್ತನ್ನು ಪಾಲಿಸಬೇಕು. ಆ ರೀತಿ ಪ್ರವೇಶ ಪಡೆದ ಮಕ್ಕಳನ್ನು ಉಳಿದ ಮಕ್ಕಳಿಂದ ತಾರತಮ್ಯ ಮಾಡಬಾರದು ಅಥವಾ ಪ್ರತ್ಯೇಕ ಮಾಡಬಾರದು ಅಥವಾ ಪ್ರತ್ಯೇಕವಾಗಿ ಯಾವುದೇ ರೀತಿಯಲ್ಲಿ ನಡೆಸಿಕೊಳ್ಳಬಾರದು.
4. ಖಂಡಿಕೆ 3 ರಲ್ಲಿ ಉಲ್ಲೇಖಿಸಿದ ಮಕ್ಕಳಿಗಾಗಿ ಕಾಯಿದೆಯ ಕಲಂ 12(2) ಪ್ರಕಾರ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳತಕ್ಕದು. ಮತ್ತು ಅಂತಹ ಮಕ್ಕಳ ಶುಲ್ಕ ಮರುಪಾವತಿ ಸ್ವೀಕರಿಸುವ ಸಲುವಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯತಕ್ಕದ್ದು. ಮತ್ತು ಲೆಕ್ಕ ಪರಿಶೋಧನೆಗೆ ಒಳಗಾಗತಕ್ಕದ್ದು.
5. ಶಾಲೆಯು / ಆಡಳಿತ ಮಂಡಳಿಯು ಮಕ್ಕಳ ಪೋಷಕರಿಂದ ವರ್ಷದ ಪ್ರವೇಶದ ಸಂದರ್ಭದಲ್ಲಿ ಅಥವಾ ಶೈಕ್ಷಣಿಕ ವರ್ಷದ ಸಮಯದಲ್ಲಿ ಯಾವುದೇ ತರಹದ ಮೂಲಧನ ಶುಲ್ಕ ಅಥವಾ ಡೊನೇಷನ್ ಸಂಗ್ರಹಿಸಬಾರದು. ಇಲಾಖೆಯಿಂದ ಅನುಮತಿ ಪಡೆದ ಬೋಧನಾ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು. ಹಾಗೂ ಇಲಾಖೆಯಿಂದ ಅನುಮತಿ ಪಡೆದ ಶುಲ್ಕದ ವಿವರದ ಮಾಹಿತಿಯನ್ನು ಸೂಚನಾ ಫಲಕದಲ್ಲಿ ಎದ್ದು ಕಾಣುವ ರೀತಿಯಲ್ಲಿ ಪ್ರದರ್ಶಿಸತಕ್ಕದ್ದು.
6. ಶಾಲೆಯವರು ಮಕ್ಕಳನ್ನು ದಾಖಲು ಮಾಡಿಕೊಳ್ಳುವ ಸಂದರ್ಭದಲ್ಲಿ ಮಗುವಿನ ಅಥವಾ ಪೋಷರಿಗೆ ಯಾವುದೇ ಪರೀಕ್ಷೆ ಮತ್ತು ಸಂದರ್ಶನವನ್ನು ನಡೆಸಬಾರದು
7. ಇಲಾಖೆಯು ಅಧಿಸೂಚಿಸಿದ ವೇಳೆಯಲ್ಲಿ ಪ್ರವೇಶವನ್ನು ಮಾಡಿಕೊಳ್ಳತಕ್ಕದ್ದು.
8. ಯಾವುದೇ ಮಗುವಿಗೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.
   1) ವಯಸ್ಸು ರುಜುವಾತು ಕೊರತೆಯಿಂದ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.
   2) ಜಾತಿ, ಧರ್ಮ, ಮತ್ತು ಅಥವಾ ಜನನ ಸ್ಥಳದ ಆಧಾರದ ಮೇಲೆ ಅಥವಾ ಭಾಷೆ ಆಧಾರದ ಮೇಲೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.
   3) ಒಂದುವೇಳೆ ಪ್ರವೇಶವನ್ನು ವಿಸ್ತರಿಸಿದ ಅವಧಿಯಲ್ಲಿ ಪ್ರವೇಶಕ್ಕೆ ಬಂದಲ್ಲಿ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.
9. ಶಾಲೆಯಲ್ಲಿ ಈಕೆಳಕಂಡ ಅಂಶಗಳನ್ನು ಖಾತ್ರಿಗೊಳಿಸಿಕೊಳ್ಳತಕ್ಕದ್ದು.
   1) ಪ್ರವೇಶ ಮಾಡಿಕೊಂಡ ಯಾವುದೇ ಮಗುವನ್ನು ಯಾವುದೇ ತರಗತಿಯಿಂದ ಹಿಂದಕ್ಕೆ ಕಳುಹಿಸಬಾರದು ಅಥವಾ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವ ತನಕ ಶಾಲೆಯಿಂದ ಹೊರಕ್ಕೆ ಕಳುಹಿಸಬಾರದು.
   2) ಯಾವುದೇ ಮಗುವಿಗೆ ಭೌತಿಕ ಶಿಕ್ಷೆ ಮತ್ತು ಮಾನಸಿಕ ಹಿಂಸೆ ಕೊಡಬಾರದು.
   3) ಯಾವುದೇ ಮಗುವು ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವ ತನಕ ಯಾವ ಮಂಡಳಿಯ ಪರೀಕ್ಷೆಯನ್ನು ಪಾಸು ಮಾಡುವ ಅಗತ್ಯವಿಲ್ಲ.
   4) ಪ್ರಾಥಮಿಕ ಶಿಕ್ಷಣ ಪೂರೈಸಿದ ಪ್ರತಿ ಮಗುವಿಗೆ ನಿಯಮ 21 ರಲ್ಲಿ ಮಾಡಿದ ಪ್ರಮಾಣ ಪತ್ರವನ್ನು ಕೊಡಬೇಕು.
   5) ಶಾಲೆಯು ಮಗುವನ್ನು ವಿಶೇಷ ಅಗತ್ಯಗಳೊಂದಿಗೆ, ಕಾಯಿದೆಯ ಉಪಬಂಧಗಳ ಪ್ರಕಾರ ವಿಶೇಷ ಮಕ್ಕಳನ್ನು ಪ್ರವೇಶ ಮಾಡಿಕೊಳ್ಳತಕ್ಕದ್ದು.
   6) ನೇಮಕಗೊಂಡ ಶಿಕ್ಷಕರು ಆರ್.ಟಿ.ಇ ನಿಯಮಗಳಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಿಗಾಗಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
   7) ಕಾಯಿದೆ ಕಲಂ 24(1) ರಲ್ಲಿ ಮತ್ತು ಆರ್.ಟಿ.ಇ. ನಿಯಗಳಲ್ಲಿ ನಿಗದಿಪಡಿಸಿದ ಕರ್ತವ್ಯಗಳನ್ನು ಶಿಕ್ಷಕರು ಮಾಡಬೇಕು ಮತ್ತು ಅವರು ಖಾಸಗಿ ಬೋಧನೆ ಮಾಡಬಾರದು.
10. ಶೈಕ್ಷಣಿಕ ಪ್ರಾಧಿಕಾರವು ಮಾನ್ಯ ಮಾಡಿದ ಪಠ್ಯಕ್ರಮವನ್ನು ಮತ್ತು ಪಠ್ಯ ಪುಸ್ತಕಗಳನ್ನು ಮಾತ್ರ ಅನುಸರಿಸಬೇಕು.
11. ಕಾನೂನಿನ ಕಲಂ 19 ರಲ್ಲಿ ನಿಗದಿಪಡಿಸದಂತೆ, ಶಾಲೆಯಲ್ಲಿ ದೊರೆಯಬಹುದಾದ ಸೌಲಭ್ಯಗಳ ಪ್ರಮಾಣಕ್ಕನುಸಾರವಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲುಮಾಡಿಕೊಳ್ಳತಕ್ಕದ್ದು.
12. ಆರ್.ಟಿ.ಇ. ಕಾಯ್ದೆ 19ರ ಪ್ರಕಾರ ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸತಕ್ಕದ್ದು.
13. ಶಾಲೆಯು ಒಳಗಡೆ ಅಥವಾ ಹೊರಗಡೆ ಯಾವುದೇ ಅನಧಿಕೃತ ತರಗತಿಗಳನ್ನು ಅಥವಾ ವಿಭಾಗಗಳನ್ನು ನಡೆಸಬಾರದು.

PRINCIPAL
SRIKARI PUBLIC SCHOOL (CBSE)
A Senior Secondary School
ANANTHASAYANAGUDI
HOSAPETE - 583 201.

14. ಶಾಲೆಯ ಕಟ್ಟಡ, ಆಟದ ಮೈದಾನ ಅಥವಾ ಇನ್ನಿತರೆ ಸೌಲಭ್ಯಗಳನ್ನು ಯಾವುದೇ ಶೈಕ್ಷಣಿಕೇತರ ಚಟುವಟಿಕೆಗಳಿಗೆ ಬಳಸಬಾರದು
15. ಶಾಲೆಯನ್ನು ಯಾವುದೇ ವ್ಯಕ್ತಿ ಅಥವಾ ಸಮೂಹ ಅಥವಾ ವ್ಯಕ್ತಿಗಳ ಸಮೂಹದ ಉಪಯೋಗದ ಲಾಭಕ್ಕೆ ಬಳಸಬಾರದು.
16. ಶಾಲೆಯ ಲೆಕ್ಕ ಪತ್ರಗಳನ್ನು ಬ್ಯಾಂಕ್ ಖಾತೆಗಳನ್ನು ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧಿಸಬೇಕು ಮತ್ತು ಅಂತಹ ಲೆಕ್ಕ ಪರಿಶೀಲಿಸಿದ ಹೇಳಿಕೆಗಳನ್ನು ಉಪನಿರ್ದೇಶಕರಿಗೆ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರತಿ ವರ್ಷ ಜೂನ್ ತಿಂಗಳ ಕೊನೆಯೊಳಗೆ ಕಳುಹಿಸಬೇಕು.

ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಆದೇಶವು ತನ್ನಿಂದತಾನೇ ರದ್ದಾಗುತ್ತದೆ. ಎಂದು ಭಾವಿಸುವುದು. ಸದರಿ ಶಾಲೆಯ ತಾತ್ಕಾಲಿಕ ಮಾನ್ಯತೆಯನ್ನು ಈ ಕಛೇರಿಯ ನೋಂದಣಿ ವಹಿಯ ಪುಟ ಸಂಖ್ಯೆ: 01/17-18 ಸಂಪುಟ 1 ರಲ್ಲಿ ದಾಖಲಿಸಲಾಗಿದೆ ಎಂದು ದೃಢೀಕರಿಸಲಾಗಿದೆ.

ಉಪನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ

ಪ್ರತಿಯನ್ನು

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ
3) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸಪೇಟೆ ಇವರ ಮಾಹಿತಿಗಾಗಿ
4) ಅಧ್ಯಕ್ಷರು / ಕಾರ್ಯದರ್ಶಿಗಳು, ಶ್ರೀಕರಿ ಎಜುಕೇಷನಲ್ ಟ್ರಸ್ಟ್, ಹೊಸಪೇಟೆ, ಬಳ್ಳಾರಿ ಜಿಲ್ಲೆ

PRINCIPAL
SRIKARI PUBLIC SCHOOL (CBSE)
A Senior Secondary School
ANANTHASAYANAGUDI
HOSAPETE - 583 201.